ಇ.ಸಿ.ಎ  ನಂ. 1/2020

ಪಿ.ಡಬ್ಲ್ಯೂ.1

ದಿನಾಂಕಃ 03.10.2022
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು 2 ನೇ ಎದುರುದಾರ ಪರವಾಗಿ ಶ್ರೀ. ಆರ್.ಎನ್.ಡಿ ವಕೀಲರಿಂದ ಃ

4. ನಾನು 2 ನೇ ತರಗತಿಯವರೆಗೆ ಶಹಾಪೂರ ತಾಲೂಕಿನ ಆಲ್ದಾಳ ಗ್ರಾಮದಲ್ಲಿ ಓದಿರುತ್ತೇನೆ. ಶಾಲಾ ದಾಖಲಾತಿಗಳಲ್ಲಿ ನನ್ನ ಜನ್ಮ ದಿನಾಂಕ ಎಷ್ಟು ಇರುತ್ತದೆ ಎಂದು ನನಗೆ ನೆನಪಿಲ್ಲ ಆದರೆ ನನ್ನ ಜನ್ಮ ದಿನಾಂಕ ವಾಹನ ಚಾಲನಾ ಪರವಾನಿಗೆ ಪತ್ರದಲ್ಲಿ ನಮೂದಿಸಲಾಗಿದೆ. ನನ್ನ ಆಧಾರ ಕಾರ್ಡನ ಪ್ರತಿ ಈ ಪ್ರಕರಣದಲ್ಲಿ ಹಾಜರಪಡಿಸಿರುತ್ತೇನೆ. ನನ್ನ ಶಾಲಾ ದಾಖಲಾತಿಯಲ್ಲಿ ನಮೂದಿಸಿರುವ ಜನ್ಮ ದಿನಾಂಕದ ಪ್ರಕಾರ ನನ್ನ ವಯಸ್ಸು 40 ವರ್ಷಕ್ಕಿಂತ ಹೆಚ್ಚಿಗೆ ಇರುವ ಕಾರಣ ಶಾಲಾ ದಾಖಲಾತಿಯನ್ನು ಈ ಪ್ರಕರಣದಲ್ಲಿ ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕಾಲಕ್ಕೆ ನನ್ನ ವಯಸ್ಸು 32 ವರ್ಷ ಇದ್ದಿತ್ತು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನ ಚಾಲನಾ ಪರವಾನಿಗೆ ಪತ್ರದಲ್ಲಿ ನಮೂದಿಸಿರುವ ಜನ್ಮ ದಿನಾಂಕಃ 04.08.1987 ಎಂದು ನಮೂದಿಸಿರುವುದು ಸುಳ್ಳು ಎಂದರೆ ಸರಿಯಲ್ಲ.

5. ನಾನು ಕೆಲಸ ಮಾಡುತ್ತಿದ್ದ ಮಾಲೀಕ ನನಗೆ ವೇತನವನ್ನು ನಗದುರೂಪದಲ್ಲಿ ಪಾವತಿಸುತ್ತಿದ್ದರು. ಅಪಘಾತದ ಕಾಲಕ್ಕೆ ಲಾರಿ ನಂ. ಕೆಎ-51-ಬಿ-8603 ಇದರಲ್ಲಿ ಲೇಬರ ಯಾರು ಇರಲಿಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಲಬುರಗಿಯ ಸಂಚಾರಿ ಹೆಚ್ಚುವರಿ ಪೊಲೀಸಠಾಣೆಗೆ ಹೋಗಿರುವುದಿಲ್ಲ. ಆ ದಿನ ನಾನು ಲಾರಿ ಚಲಾಯಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಎದುರುದಾರರ ಮಧ್ಯ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ಅವರು ಲಾರಿಯ ಮಾಲೀಕರಾಗಿದ್ದು ನಾನು ಆ ಲಾರಿಯ ಚಾಲಕ ಎಂದು ಅವರ ಬಳಿ ಕೆಲಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ.

6. 1 ನೇ ಎದುರುದಾರನ ಅಡ್ಡ ಹೆಸರು (ಸರ ನೇಮ) ನನಗೆ ಗೊತ್ತಿಲ್ಲ. ಅವರ ಮನೆಯ ನಂಬರ ನನಗೆ ಗೊತ್ತಿಲ್ಲ. ಅವರ ಮನೆಯ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. 1 ನೇ ಎದುರುದಾರನ ತಂದೆಯ

ಹೆಸರು ನನಗೆ ಗೊತ್ತಿಲ್ಲ. ಆ ದಿನ ಅಪಘಾತದ ಕಾಲಕ್ಕೆ ನಾನು ಚಲಾಯಿಸುತ್ತಿದ್ದ ಲಾರಿಗೆ ಇದ್ದಂತಹ ಲಾರಿಯ ನಂಬರ ನನಗೆ ಗೊತ್ತಿಲ್ಲ. ಆ ಲಾರಿಯ ಮಾಲೀಕ ಮತ್ತು ಚಾಲಕನ ಹೆಸರು ನನಗೆ ಗೊತ್ತಿಲ್ಲ. ನಾನು ಪ್ರಥಮವಾಗಿ ನನ್ನ ಲಾರಿಯ ಮುಂದೆ ಹೋಗುತ್ತಿದ್ದ ಇನ್ನೊಂದು ಲಾರಿಯನ್ನು ನೋಡಿದಾಗ ಎರಡು ಲಾರಿಗಳ ಮದ್ಯ ಅಂತರ ಅಂದಾಜು 40 ಅಡಿ ಇದ್ದಿತ್ತು. ಸದರಿ ಅಪಘಾತದ ಸ್ಥಳ ಕಟ್ಟಿ ಸಂಗಾವಿಯ ಹೊಸ ಬ್ರಿಡ್ಜ ಬಳಿ ಇರುತ್ತದೆ. ಅಲ್ಲಿ 60 ಅಡಿ ಅಗಲದ ರಸ್ತೆ ಇರುತ್ತದೆ ಎಂದರೆ ಸರಿ. ಆ ರಸ್ತೆ ದ್ವಿಪಥ ರಸ್ತೆ ಆಗಿರುತ್ತದೆ ಅಂದರೆ ಸರಿ. ಅಪಘಾತದ ಕಾಲಕ್ಕೆ ನನ್ನ ಎದುರುಗಡೆಯಿಂದಾಗಲಿ ಅಥವಾ ಹಿಂದುಗಡೆಯಿಂದಾಗಲಿ ಯಾವುದೇ ವಾಹನ ಬರುತ್ತಿರಲಿಲ್ಲ ಎಂದರೆ ಸರಿ. ಎದುರಿನ ಲಾರಿಗೆ ಓವರ ಟೇಕ್ ಮಾಡಿ ಮುಂದೆ ಹೋಗಲು ಅವಕಾಶ ಇದ್ದಿತ್ತು ಎಂದರೆ ಸಾಕ್ಷಿಯು ಎದುರಿನ ಲಾರಿಯ ಚಾಲಕ ಒಮ್ಮೆಲೇ ಬ್ರೆಕ್ ಹಾಕಿ ನಿಲ್ಲಿಸಿದರಿಂದ ಓವರ ಟೇಕ ಮಾಡಿ ಹೋಗಲು ಆಗಲಿಲ್ಲ ಎಂದು ಹೇಳುತ್ತಾರೆ. ನಾನು ಚಲಾಯಿಸುತ್ತಿದ್ದ ಲಾರಿಗೆ ಬ್ರೆಕ್ ಸುಸ್ಥಿತಿಯಲ್ಲಿ ಇದ್ದಿತ್ತು ಆದರೆ ತಕ್ಷಣದಲ್ಲಿ ನಿಯಂತ್ರಣ ಮಾಡಲು ಆಗಿರುವುದಿಲ್ಲ.

7. ಸದರಿ ಅಪಘಾತದಲ್ಲಿ ನನ್ನ ಬಲಗಾಲಿಗೆ ಮೂಳೆ ಮುರಿತದ ಗಾಯವಾಗಿರುತ್ತದೆ. ಅಪಘಾತದ ನಂತರ ಡಾಃ ಕಾಮರೆಡ್ಡಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನಾನು 45 ದಿವಸಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಂತರದಲ್ಲಿ ಮಿರಜ ಆಸ್ಪತ್ರೆಯಲ್ಲಿ ಸಹ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನ್ನ ಮುಂದೆ ಹೋಗುತಿದ್ದ ಲಾರಿಯ ಹಿಂಬದಿಯಲ್ಲಿ ಜಖಂ ಆಗಿರುತ್ತದೆ. ಸದರಿ ಲಾರಿಗೆ ಹಿಂಬದಿಯಲ್ಲಿ ಜಖಂ ಆಗಿತ್ತು ಎಂದು ಹೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನಗೆ ಪ್ರತಿ ತಿಂಗಳು 21,000/- ರೂಪಾಯಿ ವೇತನ ಹಾಗೂ 500/- ರೂಪಾಯಿ ದಿನ ಭತ್ಯ ಕೊಡುತ್ತಿದ್ದರು ಎಂದು ಹೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಲಾರಿಯ ಫಿಟನ್ಸೆ ಸರ್ಟಿಫಿಕೇಟ ಮತ್ತು ಪರ್ಮಿಟ ಸರ್ಟಿಫಿಕೆಟ ಇದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

9. ನಾನು ಈಗಾಲೂ ಸಹ ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ಪಡೆದುಕೊಳ್ಳಲು 5 ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೋವಿಡ್-19 ಸಂದರ್ಭದಲ್ಲಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರಣ ಇತರೆ ಖರ್ಚಚಿಗಾಗಿ 1 ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ತಮ್ಮ ಲಾರಿಯ ಚಾಲಕ ಮತ್ತು ಇತರ ಸಿಬ್ಬಂದಿಗಳ ದಿನ ಹಾಜರಿ ಪುಸ್ತಕ ಇಟ್ಟಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಟಿಪ್ಪರನಲ್ಲಿ ಕೆಲಸ ಮಾಡಲು 1 ನೇ ಎದುರುದಾರರ ಬಳಿ ಲೇಬರ ಇರಲಿಲ್ಲ. 1 ನೇ ಎದುರುದಾರರ ಬಳಿ ಒಂದೇ ಟಿಪ್ಪರ ವಾಹನ ಇರುತ್ತದೆ. ನಾನು 1 ನೇ ಎದುರುದಾರರ ಬಳಿ ಕೆಲಸ ಮಾಡದೇ ಇದ್ದರೂ ಸಹ ಅವರೊಂದಿಗೆ ಶಾಮಿಲಾಗಿ ಪರಿಹಾರ ಧನ ಪಡೆದುಕೊಳ್ಳಲು ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.